ಕೊಂಕಾಗಿ ಇಳಿಬಿದ್ದ ಕುರುಳುಗಳನ್ನು ಅತ್ತಿತ್ತ ಹೊಯ್ದಾಡುವಂತೆ ಕೊರಳನ್ನು ತಿರುಗಿಸುತ್ತ, ಶ್ರೇಷ್ಠಪದ್ಯಗಳನ್ನು ವಾಚಿಸುತ್ತ ಕೇಳುಗರನ್ನು ಸಮ್ಮೋಹನಕ್ಕೆ ಒಳಪಡಿಸುತ್ತಿದ್ದರು; ಸಜ್ಜನರೆಂದು ಖ್ಯಾತರಾದ ಮತ್ತೆ ಕೆಲವರು, ಕೋರೆದಾಡೆಗಳನ್ನು ಬೆಳೆಸಿಕೊಂಡು ತಮ್ಮ ಗೋದಾಮಿನಲ್ಲಿದ್ದ ಸಮಸ್ತ ಹತ್ಯಾರಗಳನ್ನು ತೆಗೆದು ಗೋಷ್ಠಿಯಲ್ಲೇ ಒಬ್ಬ ಬಲಿಪಶುವನ್ನು ಹುಡುಕಿ ಕಾಳಗವಾಡುವರು; ಕೆಲವರ ಮೈಯೊಳಗೆ ದುಃಖಗೀತೆಗಳನ್ನು ಹಾಡಿದ ಕಿಶೋರಕುಮಾರ್ ಮಹಮದ ರಫಿಯರ ಆತ್ಮ ಪ್ರವೇಶಿಸಿ ಪಾನಗೋಷ್ಠಿ ಸಂಗೀತ ಕಛೇರಿಯಾಗುವುದು. ಮನೆಯಲ್ಲಿ ಭಯಂಕರ ಮಡಿವಂತರಾದ ಕೆಲವರು, ಕೂಸುಬಿಟ್ಟ ಶೇಷಾನ್ನವನ್ನು ತಾಯಿ ಬಾಯಿಗೆ ಎಸೆದುಕೊಳ್ಳುವಂತೆ, ಪಕ್ಕದವನ ಬಟ್ಟಲಿಂದಲೂ ಕುಡಿಯುತ್ತ, ಆತನನ್ನು ತಬ್ಬಿ ಮಾತಾಡುತ್ತ ಅಸ್ಪೃಶ್ಯತೆಗೆ ಕಿಚ್ಚಿಡುವರು. ರಾತ್ರಿಯಿಡೀ ಬೈದು ಕೂಗಾಡಿ ಅಳುವ ದೇವನೂರರ ಕತೆಯ ಗ್ಯಾಂಗ್ಮನ್ ಸಿದ್ಧಪ್ಪನ ತಮ್ಮನಂತಿರುವ ಕೆಲವರು, ಹೆಪ್ಪುಗಟ್ಟಿದ ತಮ್ಮ ದುಮ್ಮಾನವನ್ನು ಮೇಜಿನ ಮೇಲೆ ಮುಜುಗರವಿಲ್ಲದೆ ಇಟ್ಟು ಕರಗಿ ಹಗುರಾಗುವರು. ಕನ್ನಡ ಬಿಟ್ಟರೆ ಬೇರಾವ ಭಾಷೆಯೂ ಬಾರದವರು, ಪೆಗ್ಗು ಮುಗಿದೊಡನೆ ಆಗಷ್ಟೆ ಲಂಡನಿಂದ ಬಂದಿಳಿದವರಂತೆ ಇಂಗ್ಲೀಷಿನಲ್ಲಿ ಸಂಭಾಷಣೆಗೆ ಹೊರಳಿಕೊಳ್ಳುವುದನ್ನು ನೋಡುವುದಕ್ಕಂತೂ ಎರಡು ಕಣ್ಣು ಸಾಲದು. ಇಲ್ಲಿ ಪುಕ್ಕಲರು 'ಭುಜಬಲದ ಪರಾಕ್ರಮ' ಮೆರೆಯುವರು. ಪಾನಂ ಮೂಕಂ ಕರೋತಿ ವಾಚಾಲಂ; ವಾಚಾಲಂ ಕರೋತಿ ಮಹಾಮೂಕಂ. ಇಲ್ಲಿ ಅಳುನಗು ಹೊಯ್‌ಕೈ ಬೈದಾಟ ಸಾಮಾನ್ಯ. ಸಣ್ಣ ಕಾರಣಕ್ಕೂ ಚಂಡಿಹಿಡಿದು ಗಂಟೆಗಟ್ಟಲೆ ವಾದಿಸುವರು ಹೇರಳ. ಯಾವ ಭಾವಪ್ರಕಟಣೆಗೂ ಬಲವತ್ತರ ಕಾರಣದ ಆವಶ್ಯಕತೆಯಿಲ್ಲ. ಮುಖ್ಯವೆಂದರೆ, ರಾತ್ರಿ ಪ್ರಕಟವಾಗುವ ಭಾವಗಳಿಗೆ ಮಾರನೆದಿನ ಹೊಣೆ ಹೊರುವುದಿಲ್ಲ. ಒಂದೇ ಉದಾಹರಣೆ ಕೊಡುವೆ. ತಮ್ಮ ಕೃತಿರತ್ನಕ್ಕೆ ಪ್ರಶಸ್ತಿ ಬಾರದಂತೆ ಫಿತೂರಿ ಮಾಡಿದ ಪತ್ರಕರ್ತರೊಬ್ಬರಿಗೆ ಲೇಖಕರೊಬ್ಬರು ಪರಸ್ಥಳದಲ್ಲಿ ಕೂಡಿದ್ದ ಪಾನಸಭೆಯಲ್ಲಿ ಯದ್ವಾತದ್ವಾ ತಡವಿಕೊಂಡರು. ಅಪಮಾನಿತ ಪತ್ರಕರ್ತನ ಆತ್ಮಹತ್ಯೆ ಈ ರಾತ್ರಿ ಖಚಿತ ಎಂದು ನಾವೆಲ್ಲ ಊಹಿಸಿದ್ದೆವು. ಮುಂಜಾನೆ ನೋಡಲು ಇಬ್ಬರೂ ವಾಕಿಂಗ್ ಮುಗಿಸಿ ಜನ್ಮಾಂತರದ ಗೆಳೆಯರಂತೆ ಕೈಕೈಹಿಡಿದು ನಗಾಡುತ್ತ ಬರುತ್ತಿದ್ದಾರೆ.

ಇಲ್ಲಿಯೇ ಪಾನಿಯೊಬ್ಬರು ಕೊಡುಗೈ ದಾನಿಗಳಾದ ಪವಾಡವೊಂದನ್ನು ನಿವೇದಿಸಬಹುದು. ಅದೊಂದು ಕಾವ್ಯಚರ್ಚೆಯನ್ನು ಶಿಖರಸ್ಥಿತಿಗೆ ತಲುಪಿಸಿದ್ದ ಗೋಷ್ಠಿಯಾಗಿತ್ತು. ಚರ್ಚೆಯನ್ನು ವೈಟರನೊಬ್ಬ ಕದ್ದುನಿಂತು ಅತೀವ ಆಸಕ್ತಿಯಿಂದ ಆಲಿಸುತ್ತಿದ್ದ. ಪಾರ್ಟಿಗಳಲ್ಲಿ ಬಿಲ್ಲಾಗಮನದ ಹೊತ್ತಿಗೆ ಬಾತ್‌ರೂಮಿಗೆ ತೆರಳಿ ತಪ್ಪಿಸಿಕೊಳ್ಳುತ್ತಿದ್ದ ಜುಗ್ಗಕವಿಯೊಬ್ಬರು, ಅವನನ್ನೇ ಕಿರುಗಣ್ಣಿಂದ ಗಮನಿಸುತ್ತಿದ್ದು, ಸಮೀಪ ಕರೆದು ವಿಚಾರಿಸಿದರು. ಅವನು ತಾನು ವಿದ್ಯಾರ್ಥಿಯಾಗಿದ್ದು, ಕೈಖರ್ಚಿಗಾಗಿ ಬಾರಿನಲ್ಲಿ ರಾತ್ರಿಪಾಳಿಗೆ ಕೆಲಸ ಮಾಡುತ್ತಿರುವುದಾಗಿಯೂ ಅವರ ಕವನಗಳೆಲ್ಲ ಬಾಯಿಪಾಠ ಆಗಿವೆಯೆಂದೂ ಅವರಿಗೆ ಮದ್ಯ ತಂದುಕೊಡುತ್ತಿರುವುದು ತನ್ನ ಜೀವನದ ಅವಿಸ್ಮರಣೀಯ ಅನುಭವವೆಂದೂ ನುಡಿದನು. ನಿಜದ ಪ್ರಮಾಣವೆಷ್ಟೊ ತಿಳಿಯದು. ತಮ್ಮ ಕಾವ್ಯಕ್ಕೆ ಸಹೃದಯರಿಲ್ಲವೆಂದು ಖಿನ್ನರಾಗಿದ್ದ ಕವಿಗಳು ಕೂಡಲೇ ಅವನನಪ್ಪಿಕೊಂಡು, ಜುಬ್ಬದ ಜೇಬಿಗೆ ಕೈಹಾಕಿ ಮುಷ್ಟಿಗೆ ಸಿಕ್ಕಷ್ಟು ನೋಟುಗಳನ್ನು ಹೊರತೆಗೆದು ಇನಾಮಾಗಿ ನೀಡಿದರು. ವಾಚನ್ನು ಕಳಚಿ ಅವನ ಕೈಗೆ ಕಟ್ಟಿದರು. ಸದ್ಯ ಅವರ ಕೊರಳಲ್ಲಿ ಚಿನ್ನದ ಚೈನಿರಲಿಲ್ಲ. ನಮ್ಮ ಬೀದಿಯ ಮುನಿಯಪ್ಪನೂ ಹೀಗೇ ಮಾಡುತ್ತಿದ್ದ.